ಓ.ಎಸ್.ನಂ.248/2022
ಪಿ.ಡಬ್ಲ್ಯೂ-01

<u>ಸಾಕ್ಷಿಯನ್ನು ದಿಃ **03.07.2024** ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>
<u>ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ. **T.G.T.**ವಕೀಲರಿಂದ.</u>

ನನ್ನ ತಾತನ ಹೆಸರು ಮೂಡಲಗಿರಿ ವೆಂಕಟೇಗೌಡ ಆಗಿರುತ್ತದೆ. ಅವರಿಗೆ 3 ಜನ ಗಂಡು ಮಕ್ಕಳು ಅವರುಗಳೆಂದರೆ ತಿಮಯ್ಯ, ಮೂಡಲಗಿರಿಯ್ಯ ಮತ್ತು ಗಿರಿಗೌಡ ಆಗಿರುತ್ತಾರೆ. ಸರ್ವೆ ನಂ 29/1 ರಲ್ಲಿ 15 ವರೆ ಗುಂಟೆ ಜಮೀನು ಇದ್ದು ಅದರಲ್ಲಿ ನಿಮಗೂ ಸಹ 10 ಗುಂಟೆಯಲ್ಲಿ ಹಕ್ಕು ಇದೆ ಎಂದರೆ ಸಾಕ್ಷಿ ಸದರಿ ಜಮೀನು ಇಲ್ಲಿದೆ ಎಂದು ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ. ಮುಂದುವರೆದು ನನ್ನ ತಂದೆ ಮಾಡಿಕೊಂಡಿದ್ದು ಅದು ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ. ಸದರಿ ಆಸ್ತಿಯನ್ನು ಈ ಪ್ರಕರಣದಲ್ಲಿ ಸೇರಿಸಿಲ್ಲವೆಂದರೆ ಸಾಕ್ಷಿ ಸದರಿ ಆಸ್ತಿಯ ಬಗ್ಗೆ ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ.

ತಿಮಯ್ಯ, ಮೂಡಲಗಿರಿಯ್ಯ ಮತ್ತು ಗಿರಿಗೌಡ ನಾನು ನಾರಾಯಣಪ್ಪ 1ನೇ ಮೂಡಲಗಿರಿಯ್ಯ ದಿಃ 05. 02.1995 ರಲ್ಲಿ ಎಲ್ಲಾ ಸೇರಿ ಮೂಲ ಪುರುಷ ಮೂಡಲಗಿರಿಯ್ಯ, ವೆಂಕಟಗೌಡ ಅವರಿಗೆ ಸೇರಿದ್ದ ಎಲ್ಲಾ ಆಸ್ತಿಗಳನ್ನು ಭಾಗ ಮಾಡಿಕೊಂಡಿದ್ದೀರಿ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ.

ಸದರಿ ವಿಭಾಗದ ಆಧಾರದ ಮೇರೆಗೆ ನನ್ನ ಸಹೋದರರಾದ ನಾರಾಯಣ ಮತ್ತು ಮೂಡಲಗಿರಿಯ್ಯ ಅವರು ಖಾತೆ ಬದಲಾವಣೆ ಮಾಡಿಕೊಂಡಿದ್ದಾರೆಂದರೆ ಸಾಕ್ಷಿ ನನಗೆ ಗೊತ್ತಿರಲಿಲ್ಲ ಗೊತ್ತಾದ ಬಳಿಕ ಈ ದಾವೆ ದಾಖಲು ಮಾಡಿದ್ದು ನನಗೆ ಗೊತ್ತಿಲ್ಲದೆ ಮಾಡಿಕೊಂಡಿದ್ದಾರೆಂದು ಹೇಳುತ್ತಾರೆ. ವಾದ ಪತ್ರದಲ್ಲಿ ತೋರಿಸಿರುವ ವಿಳಾಸದಲ್ಲಿ ನಾನು ನನ್ನ ಮಗ, ಸೊಸೆ ಮತ್ತು ಮೊಮ್ಮಗು ವಾಸ ಮಾಡುತ್ತಿದ್ದೇವೆ. ನನ್ನ ಹೆಂಡತಿ 18-20 ವರ್ಷಗಳ ಹಿಂದಿನಿಂದ ನನ್ನ ದೊಡ್ಡ ಮಗಳ ಮನೆಯಲ್ಲಿದ್ದಾರೆಂದು ಹೇಳುತ್ತಾರೆ.

ನನ್ನ ದೊಡ್ಡ ಮಗಳೊಂದಿಗೆ ನನ್ನ ಸಂಬಂಧ ಚನ್ನಾಗಿದೆ. ನಿಮ್ಮ ಹೆಂಡತಿಯೊಂದಿಗೆ ನಿಮ್ಮ ಸಂಬಂದ ಚನ್ನಾಗಿದೆಯಾ ಎಂದರೆ ಸಾಕ್ಷಿ ಅವರು ಬೇರೆ ಇದ್ದಾರೆಂದು ಹೇಳುತ್ತಾರೆ. ನನ್ನ ಅಣ್ಣ ಅವರಿಗೆ ಮೂಡಲಗಿರಿಯ್ಯ ಅವರಿಗೆ ಇಬ್ಬರೂ ಹೆಂಡತಿಯರು ಎಂದರೆ ಸಾಕ್ಷಿ ನನಗೆ ಹೊನ್ನಮ್ಮಾ ಎನ್ನುವ ಒಬ್ಬ ಹೆಂಡತಿ ಇದ್ದ ಬಗ್ಗೆ ಗೊತ್ತು ಇನ್ನೊಬ್ಬರ ಬಗ್ಗೆ ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ. ನಾನು ಹಾಜರು ಪಡಿಸಿರುವ ಪಹಣಿ ಪತ್ರಿಕೆಯಲ್ಲಿ ಮೂಡಲಗಿರಿಯ್ಯ ಅವರ ಹೆಂಡತಿ ಪಾಪಮ್ಮಾ ಎಂದು ಬೆರಯಲಾಗಿದ್ದು ಈ ಬಗ್ಗೆ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ನಾನು ತಿಳಿದುಕೊಂಡಿರುವುದಿಲ್ಲವೆಂದು ಹೇಳುತ್ತಾರೆ.

ಪಾಪಮ್ಮಾ ಅವರಿಗೆ ರಾಧಾ ಮತ್ತು ಪ್ರಕಾಶ ಎನ್ನುವ ಇಬ್ಬರೂ ಮಕ್ಕಳು ಇದ್ದಾರೆಂದರೆ ನನಗೆ ಗೊತ್ತಿಲ್ಲ. ಮೂಡಲಗಿರಿಯ್ಯ ಅವರ ಇಬ್ಬರೂ ಹೆಂಡತಿಯರ ಹೆಸರಿಗೆ ಆದ ಎಂ.ಆರ್.

ಸಂಖ್ಯೆ 4/2021-22 ಅನ್ನು ಪ್ರಶ್ನೆ ಮಾಡಿದ್ದೀರಾ ಎಂದರೆ ಸಾಕ್ಷಿ ನನ್ನ ತಮ್ಮ ನಾರಾಯಣ ದಾಖಲು ಮಾಡಿದ್ದಾರೆ ನಾನು ಮಾಡಿಲ್ಲವೆಂದು ಹೇಳುತ್ತಾರೆ. ನನ್ನ ಮತ್ತು ನನ್ನ ತಮ್ಮನ ನಡುವೆ ಭಾಂದವ್ಯ ಅಷ್ಟು ಚನ್ನಾಗಿಲ್ಲ. ನನ್ನ ತಮ್ಮನ ಹೆಸರಿಗೆ ಆದ ಎಂ.ಆರ್. ಸಂಖ್ಯೆ 23/2004-2005 ಅನ್ನು ನಾನು ಪ್ರಶ್ನೆ ಮಾಡಿಲ್ಲ ಕಾರಣ ನನಗೆ ಗೊತ್ತಿರಲಿಲ್ಲ.

ಸರ್ವೆ ನಂ 16/1 ರಲ್ಲಿ 1 ಗುಂಟೆ 16/1 ರಲ್ಲಿ 7 ಗುಂಟೆ 16/11 ರಲ್ಲಿ 5 ಗುಂಟೆ 11/1 ರಲ್ಲಿ 30 ಗುಂಟೆ ಜಮೀನಿನಲ್ಲಿ ಹೊನ್ನಮ್ಮಾ ಮತ್ತು ಪಾಪಮ್ಮಾ ಅವರ ಜಂಟಿ ಸ್ವಾಧೀನದಲ್ಲಿದ್ದಲ್ಲಿದ್ದಾರೆ ಎಂದರೆ ಸಾಕ್ಷಿ ವಿಭಾಗ ಆಗಿಲ್ಲ ನಾನು ಬೆಂಗಳೂರಿನಲ್ಲಿ ಕೆಲಸ ಮಾಡಿಕೊಂಡು ಇದ್ದು ನನ್ನ ತಮ್ಮಂದಿರು ಜಮೀನನ್ನು ಅನುಭವಿಸಿಕೊಂಡು ಹೋಗಲಿ ಎಂದು ಬಿಟ್ಟಿದ್ದೆ ಎಂದು ಹೇಳುತ್ತಾರೆ.

ಚೊಟ್ಟನಹಳ್ಳಿ ಹಣೆಹಂತ ಗ್ರಾಮದಲ್ಲಿ ಸರ್ವೆ ನಂ 30/4 ರಲ್ಲಿ 23 ಗುಂಟೆ ಆಸ್ತಿ ಇದೆ ಎಂದರೆ ಸಾಕ್ಷಿ ಅದು ನನ್ನ ತಂದೆಯ ಆಸ್ತಿ ಆಗಿರುತ್ತದೆ ಎಂದು ಹೇಳುತ್ತಾರೆ. ಸದರಿ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿರುತ್ತೇನೆ. ಸದರಿ ಜಮೀನು ಲಕ್ಷ್ಮಮ್ಮಾ ಕೋಂ ರಾಜಣ್ಣ ಅವರ ಹೆಸರಿಗೆ ಇದೆ ಅದರಲ್ಲಿ ನಿಮಗೆ ಹಕ್ಕಿದೆಯಾ ಎಂದರೆ ಸಾಕ್ಷಿ ಹಕ್ಕಿದೆ ಇದೆ ಸದರಿ ಸ್ವತ್ತು ನಮ್ಮ ಕುಟುಂಬದ್ದು ಎಂದು ಹೇಳುತ್ತಾರೆ. ಸದರಿ ಪಹಣಿ ಪತ್ರಿಕೆಯನ್ನು ನಿ.ಡಿ 1 ಎಂದು ಗುರುತಿಸಲಾಯಿತು. ಉರ್ಕೆಹಳ್ಳಿ ಗ್ರಾಮಕ್ಕೆ 2 ಮಾಳಿಗೆ ಮನೆಗಳು ಇವೆ ಎಂದರೆ ಸಾಕ್ಷಿ ಒಂದೇ ಇದೆ ಎಂದು ಹೇಳುತ್ತಾರೆ, ಸದರಿ ಮನೆಯನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ.

ಸದರಿ ಮನೆಯ ಖಾತಾ ಎಕ್ಸಟೇಟ್ ನನ್ನ ತಂದೆಯ ಹೆಸರಿಗೆ ಇರುತ್ತದೆ. ಉರ್ಕೆಹಳ್ಳಿ ಗ್ರಾಮದ ಸರ್ವೆ ನಂ 16/8 10 ಗುಂಟೆ ಜಮೀನು ಇದ್ದು ಅದರ ಚಕ್ಕುಬಂದಿ ಪೂರ್ವಕ್ಕೆ ರಸ್ತೆ ಪಶ್ಚಿಮಕ್ಕೆ ಕಲ್ಲುಗುಡ್ಡೆ ಉತ್ತರಕ್ಕೆ ನಾರಾಯಣ ಮತ್ತು ದಕ್ಷಿಣಕ್ಕೆ ಸ್ವತ ಈ ಚಕ್ಕುಬಂದಿಗಳ ಮದ್ಯ ಇರುವ ಜಮೀನನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ. ಸದರಿ ಸ್ವತ್ತನ್ನು ನನ್ನ ತಂದೆಯ ಅಣ್ಣನ ಮಗ ವೆಂಕಟೇಗೌಡ ಅವರಿಗೆ ವಿಭಾಗದಲ್ಲಿ ಬಿಟ್ಟುಕೊಟ್ಟಿರುತ್ತೇವೆ ಎಂದು ಹೇಳುತ್ತಾರೆ. 05.02.1995 ರಲ್ಲಿ ಸದರಿ ಸ್ವತ್ತು ನನ್ನ ಭಾಗಕ್ಕೆ ಬಂದಿದ್ದು ಅದನ್ನು ಈ ದಾವೆಯಲ್ಲಿ ಸೇರಿಸಿಲ್ಲವೆಂದರೆ ಸಾಕ್ಷಿ ನನಗೆ ಸದರಿ ವಿಭಾಗದ ಬಗ್ಗೆ ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ. ಸದರಿ ಸ್ವತ್ತು ಈಗಲೂ ಸಹ ನನ್ನ ತಂದೆ ಗಿರಿಗೌಡ ಅವರ ಹೆಸರಿಗೆ ಬರುತ್ತಿದೆ ಎಂದರೆ ಸರಿ. ನನ್ನ ತಂದೆಯ ಅಣ್ಣನ ಮಗನ ಭಾಗಕ್ಕೆ ಸದರಿ ಸ್ವತ್ತು ಹೋದ ಬಗ್ಗೆ ಪಾರಿಕತನ್ನು ನಾನು ಹಾಜರುಪಡಿಸಿರುವುದಿಲ್ಲ.

**ಮುಂದುವರೆ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ

ಕುಣಿಗಲ್.